(ಅನುಬಂಧ–1)

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ರಾಜ್ಯಾದ್ಯಂತ 2003 ರಿಂದ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಒಬ್ಬರಂತೆ ವಿದ್ಯಾವಂತ ನಿರುದ್ಯೋಗಿಗಳಿಗೆ 5 ವಿದ್ಯುತ್ ಕಂಪನಿಗಳು ಬಿಲ್ ಕಲೆಕ್ಟರ್‌ಗಳನ್ನಾಗಿ ನೇಮಕ ಮಾಡಿಕೊಂಡಿದ್ದು ಅವರಿಗೆ ಸೇವಾ ಭದ್ರತೆಯನ್ನು ಒದಗಿಸುವ ಬಗ್ಗೆ.

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವಿ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯಾದ್ಯಂತ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಬ್ಬರಂತೆ ಗ್ರಾಮೀಣ ಪ್ರದೇಶದ ವಿದ್ಯಾವಂತ ನಿರುದ್ಯೋಗಿಗಳನ್ನು 05 ವಿದ್ಯುತ್ ಕಂಪನಿಗಳು ಬಿಲ್ ಕಲೆಕ್ಟರ್ ಅಂತಾ ನೇಮಕ ಮಾಡಿಕೊಂಡಿರುತ್ತಾರೆ. ಇವರುಗಳು ಗ್ರಾಮ ವಿದ್ಯುತ್ ಪ್ರತಿನಿಧಿಗಳಾಗಿ ವಿದ್ಯುತ್ ಬಿಲ್ ಓದುವುದು, ಬಿಲ್ ವಿತರಿಸುವುದು, ಕಂದಾಯ ವಸೂಲಾತಿ ಹಾಗೂ ಸಣ್ಣ ಪುಟ್ಟ ದುರಸ್ಥಿ ಕೆಲಸಗಳನ್ನು 2003 ರಿಂದ ನಿರಂತರವಾಗಿ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ. ಆದರೆ ಇವರಿಗೆ ಈವರೆಗೂ ಸೇವಾಭದ್ರತೆ ಇರುವುದಿಲ್ಲ. ಇದರಿಂದ ಇವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಹಾಗೂ ಇವರ ಅವಲಂಬಿತ ಕುಟುಂಬಗಳು ಬೀದಿಪಾಲಾಗುವ ಸ್ಥಿತಿಯಲ್ಲಿರುತ್ತವೆ. ಆದ್ದರಿಂದ ಇವರುಗಳ ಸೇವಾಭದ್ರತೆಯನ್ನು ಒದಗಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಆಗ್ರಹಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಯುವ ಜನತೆಗೆ ಉದ್ಯೋಗವಕಾಶವನ್ನು ಕಲ್ಪಿಸುವ ಸಲುವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕಂದಾಯ ವಸೂಲಾತಿಯ ಜೊತೆಗೆ ಮೀಟರ್‌ಗಳನ್ನು ಓದುವುದು, ಬಿಲ್ಲುಗಳನ್ನು ಹಂಚುವುದು ಗ್ರಾಹಕರ ಸಣ್ಣಪುಟ್ಟ ವಿದ್ಯುತ್ ಸಂಬಂಧಿತ ದೂರುಗಳನ್ನು ದಾಖಲಿಸುವುದಕ್ಕಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಶಿಫಾರಸ್ಸಿನ ಅನ್ವಯ ಅರ್ಹತೆಗೊಳಪಟ್ಟು ಆಯಾಯ

ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರೋತ್ಸಾಹ ಧನದ ಆಧಾರದ ಮೇರೆಗೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಇವರು ಯಾವುದೇ ನೇಮಕಾತಿ ನಿಯಮಗಳ ಅಡಿಯಲ್ಲಿ ನೇಮಕ ಹೊಂದಿರುವುದಿಲ್ಲ. ಒಡಂಬಡಿಕೆಯ ಮೂಲಕ ಕೇವಲ ನಿರ್ದಿಷ್ಟ ಕೆಲಸಕ್ಕಾಗಿ ಸದರಿ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಸೇವೆಯನ್ನು ಪಡೆಯಲಾಗುತ್ತಿದೆ.

ಸದರಿ ಗ್ರಾಮ ವಿದ್ಯುತ್ ಪ್ರತಿನಿಧಿಗಳು ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಆಗಿಂದಾಗ್ಗೆ ಸರ್ಕಾರಕ್ಕೆ ಮತ್ತು ಉಭಯ ಸದನಗಳ ಮಾನ್ಯ ಅರ್ಜಿ ಸಮಿತಿಗಳಿಗೆ ಮನವಿ ಸಲ್ಲಿಸುತ್ತಿದ್ದಾರೆ. ಹೀಗಾಗಿ, ಇವರುಗಳ ಸೇವೆಯನ್ನು ಸಕ್ರಮಗೊಳಿಸುವ ಅಥವಾ ಸೇವಾ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಪರಿಶೀಲಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ. ಈ ವಿಷಯ ವಿಧಾನಸಭೆಯಲ್ಲಿ ಬಹಳ ಹಿಂದಿನಿಂದಲೂ ಕೂಡ ಚರ್ಚೆಗೆ ಬಂದಿದೆ. ಪ್ರತಿ ವರ್ಷ ಕೂಡ ಗ್ರಾಮ ವಿದ್ಯುತ್ ಪ್ರತಿನಿಧಿಗಳು ಹೋರಾಟ ಮಾಡುತ್ತಿದ್ದಾರೆ. ಕಳೆದ ವಿಧಾನಸಭೆ ಅಧಿವೇಶನ ನಡೆದಂತಹ ಸಂದರ್ಭದಲ್ಲಿ ಒಂದು ವರ್ಷದ ಹಿಂದೆ ಮಾನ್ಯ ಮುಖ್ಯಿ ಮಂತ್ರಿಗಳು ಕೂಡ ಇದರ ಬಗ್ಗೆ ಸಮಗ್ರವಾದಂತಹ ನೀತಿ ಮಾಡಬೇಕೆಂದು ಹೇಳಿ ಬೆಸ್ಕಾಂ M.D. ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದರು. ಆ ಸಮಿತಿ ಈಗಾಗಲೇ ವರದಿ ಕೊಟ್ಟಿದೆ. ಆದರೆ ಅದು ಪರಿಶೀಲನೆ ಹಂತದಲ್ಲಿದೆ. ಅನೇಕ ಕೋರ್ಟ್ ಕೇಸ್‌ಗಳು ಇವೆ. ಏಕೆಂದರೆ, ಇವರನ್ನು appoint ಮಾಡಿಕೊಳ್ಳಬೇಕಾದರೆ, ಸರಿಯಾದ ರೀತಿಯಲ್ಲಿ ನೀತಿಯನ್ನು ಪಾಲನೆ ಮಾಡಿ appointment ಮಾಡಿಕೊಂಡಿಲ್ಲ. ಕೆಲವು ಒಡಂಬಡಿಕೆಗಳಿಂದ ಮಾಡಿಕೊಂಡಿದ್ದಾರೆ. Specific ಕೆಲಸಕ್ಕೋಸ್ಕರ ಎಂದು ಇವರನ್ನು appointment ಮಾಡಿಕೊಳ್ಳಲಾಗಿದೆ. ಆದರೂ ಮೊನ್ನೆ ನಮ್ಮ ಪುಟ್ಟಣ್ಣಯ್ಯನವರು ಮತ್ತು ನಮ್ಮ ಇನ್ನು ಅನೇಕ

ಶಾಸಕರು ಕೂಡ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದರು. ನಾನು ಕೂಡ ಅವರು strike ಮಾಡುತ್ತಿದ್ದ ಜಾಗಕ್ಕೆ ಹೋಗಿ ಅವರನ್ನು ಭೇಟಿ ಮಾಡಿ ಬಂದಿದ್ದೇನೆ. ಬೆಂಗಳೂರಿನಲ್ಲಿ ಭೇಟಿ ಮಾಡಿದ್ದೇನೆ. ಅವರು ನನಗೆ ನಾಲ್ಕು ಸಾರಿ ಭೇಟಿ ಮಾಡಿದ್ದಾರೆ. ಇವರಿಗೆ ಏನಾದರೂ ಮಾಡಿ ಸಹಾಯ ಮಾಡಬೇಕೆಂದು ಸರ್ಕಾರದ ಚಿಂತನೆ ಇದೆ. ಕಾನೂನಿನ ತೊಡಕು ಕೂಡ ಇದೆ. ಈ ವರದಿಯನ್ನು ನಾವು ಗಮನದಲ್ಲಿಟ್ಟುಕೊಂಡು ಸಹಾನುಭೂತಿಯಿಂದ ಯಾವ ರೀತಿ ಸಹಾಯ ಮಾಡಬೇಕೆಂಬ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ: ಕಾನೂನು ತೊಡಕು ಇರುವುದು ನನಗೆ ಅರ್ಥವಾಗುತ್ತದೆ. ಕಾನೂನು ತೊಡಕು ಏನಿದೆ ಎಂಬ ಅರಿವೂ ನನಗಿದೆ. ಆದ್ದರಿಂದ ನನ್ನ ವಿನಂತಿ ಏನೆಂದರೆ, consolidated pay ಮಾಡಿ ನಾಲ್ಕರಿಂದ ಐದು ಸಾವಿರ ರೂಪಾಯಿ ಹೆಸ್ಕಾಂದವರು ಕೊಡುತ್ತಿದ್ದಾರೆ. ಆದ್ದರಿಂದ ಅದನ್ನು ಕೂಡಲೇ ಹೆಚ್ಚಿಸುವಂತಹ ಕೆಲಸವನ್ನು ತಾತ್ಕಾಲಿಕವಾಗಿ ಆದರೂ ತಾವು ಮಾಡಬಹುದು. ಇದು ನಿಮ್ಮ ಕೈಯಲ್ಲಿದೆ. ತಾವು ದಯವಿಟ್ಟು ಇದನ್ನು ಮಾಡಬೇಕು. ನಾವು ಹೇಗೆ ಡೈಲಿವೇಜಸ್‌ನವರಿಗೆ ಮಾಡಿದೆವು ಅಲ್ಲಿ ಕೂಡ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಇತ್ತು. Special recruitment rules ಮಾಡಿ ನಾವು ಮಾಡಿದ್ದೇವೆ. ಅದರ ಆಧಾರದ ಮೇಲೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ತಾವು ದಯವಿಟ್ಟು ಪರಿಶೀಲನೆ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್: ಖಂಡಿತ ಪರಿಶೀಲನೆ ಮಾಡುತ್ತೇವೆ. ಸಹಾನುಭೂತಿ ಇರುವುದರಿಂದಲೇ ನಾವು ಮಾಡುವುದಕ್ಕೆ ಪ್ರಯತ್ನ ಪಡುತ್ತಿರುವುದು.

ಶ್ರೀ ಬಸವರಾಜ ಬೊಮ್ಮಾಯಿ: 13 ವರ್ಷವಾಗಿದೆ.

ಶ್ರೀ ಜಗದೀಶ್ ಶೆಟ್ಟರ್: Definitely ಕಾನೂನು ತೊಡಕು ಇದೆ. ನಾವು 23,000 ಜನ ದಿನಗೂಲಿ ನೌಕರರಿಗೆ ಖಾಯಂ ನೌಕರಿ ಸೌಲಭ್ಯ ಸಿಗುವುದು ಏನು ಮಾಡಿದ್ದೇವೆ ಅದು ಇಲ್ಲಿಯೇ ಬಿಲ್ ತಂದು ಪಾಸ್

ಮಾಡಿದ್ದೇವೆ. ಅದಕ್ಕಾಗಿ ಕಾನೂನು ತೊಡಕು ಇದ್ದುದು ನಿವಾರಣೆ ಮಾಡಿ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿದರೆ ಇದು ಮಾಡುವುದಕ್ಕೆ ಬರುತ್ತದೆ. ಅದನ್ನು ಮಾಡಿ ಎಂದು ಒತ್ತಾಯ ಮಾಡುತ್ತೇನೆ. ಅವರು ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: ಸಹಾಯ ಮಾಡಬೇಕೆಂಬ ರಾಜಕೀಯ ಇಚ್ಛಾಶಕ್ತಿ ಇರುವುದರಿಂದಲೇ ಇವರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದು. ಏನಾದರೂ ಮಾಡಿ ಉಳಿಸಬೇಕೆಂದಿದ್ದೇವೆ. ಉಮಾದೇವಿ ಜಡ್ಜ್‌ಮೆಂಟ್, ಬೇರೆಲ್ಲ ಜಡ್ಜ್‌ಮೆಂಟ್ ಬಂದಿರುವುದು ನಿಮಗೆಲ್ಲ ಗೊತ್ತಿದೆ.

ಶ್ರೀ ಬಸವರಾಜ ಬೊಮ್ಮಾಯಿ: ಸರ್ಕಾರಕ್ಕೆ ರೆವಿನ್ಯೂ ಲಾಸ್ ಆಗುತ್ತಿತ್ತು. ಅಂಥದ್ದನ್ನು ಅವರು ರೆವಿನ್ಯೂ ಕಲೆಕ್ಷನ್ ಮಾಡಿ ನಿಮ್ಮ ಹೆಸ್ಕಾಂಗಳಿಗೆ ಕೊಡುತ್ತಿದ್ದಾರೆ. ಹಳ್ಳಿ ಹಳ್ಳಿ ಮನೆ ಮನೆಗಳಿಗೆ ಹೋಗಿ ರೆವಿನ್ಯೂ ಕಲೆಕ್ಷನ್ ಮಾಡಿ ಕೊಡುತ್ತಿದ್ದಾರೆ. ಅವರಿಂದ ಆದಾಯ ಇದೆ. ಆದ್ದರಿಂದ ಅವರ ಸೇವಾ ಭದ್ರತೆ ಮಾಡುವುದು ಮಾನವೀಯತೆ ಇದೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇದೇ ವಿಷಯ ನಾನೂ ಕೇಳಿದ್ದೆ. ನಾಳೆಗೆ ಹಾಕಿದ್ದೀರಿ. ಇವತ್ತೇ ಮುಗಿಸಿಬಿಡಿ. ಅವರಿಂದ ಆದಾಯ ಬರುತ್ತದೆ ಎಂದು ನೀವೇ ವರದಿಯಲ್ಲಿ ಹೇಳಿದ್ದೀರಿ. ಎಷ್ಟು ಆದಾಯ ಹೆಚ್ಚಳವಾಗಿದೆ ಎಂದು ಹೇಳಿದ್ದೀರಿ. ಮಾನವೀಯತೆಯ ದೃಷ್ಟಿಯಿಂದ ಯೋಚನೆ ಮಾಡಬೇಕಾದರೆ ಕಾನೂನು ತೊಡಕನ್ನು ಬದಿಗಿಟ್ಟೇ ಯೋಚನೆ ಮಾಡಬೇಕು. ಕಾನೂನು ತೊಡಕು ನಿವಾರಿಸುವ ಶಕ್ತಿ ನಿಮಗೆ ಇದೆ. ನಿವಾರಿಸಿ. ಅವರಿಗೆ ಸೇವಾ ಭದ್ರತೆ ಒದಗಿಸುವುದಕ್ಕೆ ಕನಿಷ್ಠ ಮಿನಿಮಮ್ ಕೂಲಿ ಎಂದು ಹೇಳುತ್ತೇವೆ ಅಷ್ಟನ್ನೂ ನಾವು ಕೊಡುತ್ತಿಲ್ಲ. ಆ ರೀತಿಯಲ್ಲಿ ಕೊಡುವ ರೀತಿಯಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಿ ತಮಗೆ ಆ ಸಾಮರ್ಥ್ಯ ಇದೆ.

ಶ್ರೀ ಡಿ.ಕೆ. ಶಿವಕುಮಾರ್: ಖಂಡಿತ. ಏನು ನಮ್ಮ ಬಸವರಾಜ ಬೊಮ್ಮಾಯಿಯವರು ಮತ್ತು ನಮ್ಮ ಚಿಕ್ಕಮಗಳೂರಿನ ಸ್ನೇಹಿತರು ಏನು ಮಾತನಾಡುತ್ತಿದ್ದಾರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳುತ್ತಿದ್ದಾರೆ, ಖಂಡಿತ ನಾವು ಅವರಿಗೆ ವೇತನ ಯಾವ ರೀತಿ ಹೆಚ್ಚಿಸುವುದಕ್ಕೆ ಸಾಧ್ಯವೋ ಯಾವ ರೀತಿ ಸಹಾಯ ಮಾಡುವುದಕ್ಕೆ ಸಾಧ್ಯವೋ ಅದನ್ನು ಖಂಡಿತ ನಾವು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು: ಕೋನರೆಡ್ಡಿ ಇಲ್ಲ. ಸಿ.ಟಿ. ರವಿ.

2. ವಿಷಯ: ರಾಜ್ಯ ಅಲ್ಪಸಂಖ್ಯಾತರ ಆಯೋಗವು ಮುಸ್ಲಿಮೇತರ ಅಲ್ಪಸಂಖ್ಯಾತ ಸಮುದಾಯದವರನ್ನು ಕಡೆಗಣಿಸುತ್ತಿದೆ ಎಂದು ಆರೋಪಿಸಿ ಸುವರ್ಣ ವಿಧಾನಸೌಧದ ಮುಂದೆ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ರಾಜ್ಯ ಅಲ್ಪಸಂಖ್ಯಾತರ ಆಯೋಗವು ಜೈನ್, ಸಿಖ್, ಪಾರ್ಸಿ, ಬೌದ್ಧ, ಕ್ರಿಶ್ಚಿಯನ್ ಧರ್ಮೀಯರನ್ನು ಕಡೆಗಣಿಸುತ್ತಿದೆ ಎಂದು ಆರೋಪಿಸಿ ಸರ್ಕಾರಿ ಸೌಲಭ್ಯಗಳ ವಂಚಿತ ಅಲ್ಪಸಂಖ್ಯಾತ ಸಮುದಾಯದವರು ಸುವರ್ಣ ವಿಧಾನಸೌಧದ ಎದುರು ಪ್ರತಿಭಟನೆ ನಡೆಸಿದ್ದಾರೆ. ರಾಜ್ಯ ಸರ್ಕಾರ ನೀಡುವ ಅನುದಾನದಲ್ಲಿ ಶೇ.99 ರಷ್ಟು ಮುಸ್ಲಿಮರಿಗಾಗಿಯೇ ವಿನಿಯೋಗಿಸಲಾಗುತ್ತಿದ್ದು ಅಲ್ಪಸಂಖ್ಯಾತರ ಎಲ್ಲ ಸಮುದಾಯದವರ ಅಭಿವೃದ್ಧಿಗೆ ಅನುದಾನ ಸಮಾನವಾಗಿ ವಿನಿಯೋಗಿಸಬೇಕು. ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಹಂಚಿಕೆಯಾಗಬೇಕೆಂಬುದು ಅವರ ಒತ್ತಾಯವಾಗಿದೆ. ಅವರ ಒತ್ತಾಯ ಪೂರ್ವಕ ಆಗ್ರಹವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಆಗ್ರಹಿಸುತ್ತೇನೆ. ಈ ವಿಷಯವನ್ನು ಪೌರಾಡಳಿದ ಮತ್ತು ಸಾರ್ವಜನಿಕ ಉದ್ಯಮಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳೆಯುತ್ತೇನೆ.